**ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್. ಎಫ್. ಸಿ ನ್ಯಾಯಾಧೀಶರ ನ್ಯಾಯಾಲಯ ಯಾದಗಿರಿ.**

**ಸಿಸಿ ನಂ. 551/2020**

| | | |
|---|---|---|
| ಸಾಕ್ಷಿಯ ಹೆಸರುಃ | ಬನ್ನಮ್ಮ | ಫ್ರಾಸಾಃ 1 |
| ತಂದೆ/ಗಂಡನ ಹೆಸರುಃ | ಸಹದೇವಪ್ಪ | ಚಾಸಾಃ 1 |
| ವಯಸ್ಸು ಃ | 48 ವರ್ಷ | ದಿಃ 17-03-2023 |
| ಉದ್ಯೋಗಃ | ಆಶಾ ಕಾರ್ಯಕರ್ತೆ | ಸಾಕ್ಷಿದಾರರಿಗೆ ಪ್ರಮಾಣ ವಚನ ಭೋದಿಸಲಾಯಿತು. |
| ವಾಸ ಸ್ಥಳಃ | ರಾಮಸಮುದ್ರ | |

**<u>ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಬಿಯೋಜಕರವರಿಂದಃ</u>**

ನನಗೆ ಚಾಸಾಃ 2 ರಿಂದ 9 ರವರ ಪರಿಚಯವಿದೆ. ನನಗೆ ಆರೋಪಿತರ ಪರಿಚಯವಿದೆ. ದಿನಾಂಕಃ 02-09-2020 ರಂದು ಆರೋಪಿತರು ಚರಂಡಿ ನೀರಿನ ಸಲುವಾಗಿ ಚಾಸಾಃ 4 ರವರನ್ನು ಹೊಡೆದಿರುತ್ತಾರೆ. ಅಷ್ಟಾದರೂ ಕೂಡ ನಾವು ಏನೂ ಅನ್ನದೆ ಸುಮ್ಮನೆ ಇದ್ದೇವು. ದಿನಾಂಕಃ 03-09-2020 ರಂದು ಬೆಳಿಗ್ಗೆ 9-00 ಗಂಟೆ ಸುಮಾರಿಗೆ ಆರೋಪಿತರೆಲ್ಲರೂ ಅಕ್ರಮಕೂಟ ರಚಿಸಿಕೊಂಡು ಬಂದು ಕೈಯಲ್ಲಿ ಕಲ್ಲು ಮತ್ತು ಬಡಿಗೆ ಹಿಡಿದುಕೊಂಡು ಹಕಾರೆ ಹೊಡೆಯುತ್ತಾ ನಮ್ಮ ಮನೆಗೆ ಬಂದಿರುತ್ತಾರೆ. ಆರೋಪಿತರೆಲ್ಲರೂ ಚರಂಡಿ ನೀರು ನಮ್ಮ ಕಡೆ ಯಾಕೆ ಬಿಡುತ್ತಾ ಇದ್ದೀರಿ ಎಂದು ನಮಗೆ ಕೇಳಿ ನಮಗೆ ಬೋಸಡಿ ಮಕ್ಕಳೇ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಎಷ್ಟು ಸಲ ಹೇಳಿದರೂ ನೀವು ಕೇಳುವುದಿಲ್ಲ ಎಂದು ಹೇಳಿರುತ್ತಾರೆ. ನಂತರ ಚಾಸಾಃ 4 ರವರು ಮನೆಯ ಮುಂದೆ ಬಂದು ನೀರು ಮುಂಚೆಯಿಂದ ಇಲ್ಲಿಂದ ಹೋಗಿದೆ ಈಗೇನು ಹೊಸದಾಗಿ ಹೇಳುತ್ತಿದ್ದೀರಾ ಎಂದು ಆರೋಪಿತರಿಗೆ ಅಂದಿರುತ್ತಾನೆ. 1 ನೇ ಆರೋಪಿತನು ಕಲ್ಲಿನಿಂದ ಚಾಸಾಃ 4 ರವರಿಗೆ ಎದೆಯ ಮೇಲೆ ಹೊಡೆದಿರುತ್ತಾನೆ. ನಂತರ ಚಾಸಾಃ 5 ರವರು ಯಾಕೆ ಜಗಳ ಮಾಡುತ್ತಿದ್ದೀರಾ ಎಂದು ಕೇಳಿದಾಗ ಆರೋಪಿತರೆಲ್ಲರೂ ಬಂದು ಚಾಸಾಃ 5 ರವರಿಗೆ ಕಲ್ಲಿನಿಂದ ಮತ್ತು ಬಡಿಗೆಯಿಂದ ಹೊಡೆದಿರುತ್ತಾರೆ. ಚಾಸಾಃ 6 ರವರು ಬಂದು ಯಾಕೆ ಚಾಸಾಃ 4 ಮತ್ತು ಚಾಸಾಃ 5 ರವರಿಗೆ ಹೊಡೆಯುತ್ತಿದ್ದೀರಿ ಎಂದು ಕೇಳಿದಾಗ ಅನಿಗೂ ಕೂಡ ಆರೋಪಿತರೆಲ್ಲರೂ ನೆಲಕ್ಕೆ ಹಾಕಿ ಕಾಲಿನಿಂದ ಒದ್ದಿರುತ್ತಾರೆ. ನಾನು ಜಗಳ ಬಿಡಿಸಲು ಹೋದಾಗ ಆರೋಪಿ ನಂಬರ 6 ಮತ್ತು 7 ರವರು ನನಗೆ ಹೊಡೆದಿರುತ್ತಾರೆ. ನಂತರ ಚಾಸಾಃ 7 ರಿಂದ 9 ರವರು ಜಗಳವನ್ನು ಬಿಡಿಸಿರುತ್ತಾರೆ. ಜಗಳ ಬಿಡಿಸಿದ

ನಂತರ ಆರೋಪಿತರೆಲ್ಲರೂ ನಮಗೆ ಇನ್ನೊಂದು ಸಲ ಸಿಗರಿ ಮಕ್ಕಳೇ ನಿಮಗೆ ಒಂದು ಗತಿ ಕಾಣಿಸುತ್ತೇವೆ ಮತ್ತು ನಿಮ್ಮ ಜೀವ ಸಹಿತ ಬಿಡುವುದಿಲ್ಲ ಎಂದು ಜೀವ ಬೆದರಿಕೆಯನ್ನು ಹಾಕಿರುತ್ತಾರೆ. ನಂತರ ನಾವು ಯಾದಗಿರಿ ಸರಕಾರಿ ಆಸ್ಪತ್ರೆಗೆ ಬಂದಿರುತ್ತೇನೆ. ನಂತರ ಚಿಕಿತ್ಸೆ ಪಡೆದುಕೊಂಡು ಮರುದಿನ ಪೋಲಿಸ ಠಾಣೆಗೆ ಹೋಗಿ ದೂರನ್ನು ಸಂಜೆಃ 4-00 ಗಂಟೆಗೆ ನೀಡಿರುತ್ತೇನೆ. ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿ ಅದು ದೂರು ಆಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1 (ಎ) ಎಂದು ಗುರುತಿಸಲಾಯಿತು. ದೂರು ನೀಡಿದ ಮರು ದಿನ ಪೋಲಿಸರು ಘಟನಾ ಸ್ಥಳಕ್ಕೆ ಬಂದು ಪಂಚಾನಾಮೆಯನ್ನು ಜರುಗಿಸಿರುತ್ತಾರೆ. ಸಾಕ್ಷಿಗೆ ಮೂರು ಬಡಿಗೆ, ಕಟ್ಟಿಗೆ ತೋರಿಸಲಾಗಿ ಅದನ್ನು ಗುರುತಿಸಿರುವುದರಿಂದ ಅವುಗಳನ್ನು ಮು. ಮಾ. 1 ರಿಂದ 3 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿತರ ಪರ ವಕೀಲರು ಶ್ರೀ ಕೆ. ಬಿ. ಇವರಿಂದ</u>

ಆರೋಪಿತರೆಲ್ಲರೂ ನನಗೆ ಸಂಬಂಧಿಕರಾಗಬೇಕು ಎಂದರೆ ಸರಿ. ಆರೋಪಿತರ ಮನೆ ನಮ್ಮ ಮನೆಯಿಂದ ದೂರ ಇದೆ ಎಂದರೆ ಸರಿ. ಆರೋಪಿ ನಂಬರ-13 ಮತ್ತು 14 ರವರ ಮನೆ ಸಮೀಪವಿದೆ. ಸದರಿ 13 ಮತ್ತು 14 ನೇ ಆರೋಪಿತರು ಬೆಂಗಳೂರಿನಲ್ಲಿ ದುಡಿಯಲು ವಾಸವಾಗಿರುತ್ತಾರೆ ಎಂದರೆ ಸರಿ. ನಮ್ಮ ಮನೆಯ ಮುಂದೆ ಸಿಸಿ ರೋಡು ಇದೆ ಎಂದರೆ ಸರಿ. ಸದರಿ ನಮ್ಮ ಮನೆಯ ಪಕ್ಕದಲ್ಲಿ 13 ನೇ ಮತ್ತು 14 ನೇ ಆರೋಪಿತರ ಖುಲ್ಲಾ ಜಾಗವಿತ್ತು ಎಂದರೆ ಸರಿ. ಆವಾಗ ನಮ್ಮ ಮನೆ ಕಟ್ಟಡವಿತ್ತು ಎಂದರೆ ಸರಿ. ಸದರಿ ಸಿಸಿ ರೋಡು ಎರಡೂ ಭಾಗದ ಕಡೆ ಚರಂಡಿ ಮಾಡಿರುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮನೆಯ ಮುಂದೆ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ 6 ನೇ ಆರೋಪಿತಳು ಮುಂಚೆ ರಾಮಸಮುದ್ರ ಗ್ರಾಮ ಪಂಚಾಯಿತಿಯ ಅಧ್ಯಕ್ಷ ಇದ್ದಳು ಎಂದರೆ ಸರಿ. ಸದರಿ 6 ನೇ ಆರೋಪಿತಳು ಭಾ.ಜ.ಪ ಪಕ್ಷಕ್ಕೆ ಸೇರಿದವಳು ಎಂದರೆ ಸರಿ. 6 ನೇ ಆರೋಪಿತಳು ಅಧ್ಯಕ್ಷ ಆದ ನಂತರ ಊರಿನ ಎಲ್ಲಾ ಕಡೆ ಸಿಸಿ ರೋಡು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ 4 ವಂದಿ ಅಣ್ಣ-ತಮ್ಮಂದಿರು ಇದ್ದಾರೆ ಅವರ ಹೆಸರು ಮಹಾದೇವಪ್ಪ ತಂದೆ ಚಂದಪ್ಪ, ಅರ್ಜುನಪ್ಪ ತಂದೆ ಚಂದಪ್ಪ, ಭೀಮಶಪ್ಪ ತಂದೆ ಚಂದಪ್ಪ , ಮತ್ತು ನನ್ನ ಗಂಡ. ಮಹದೇವಪ್ಪನ ಮಗಳು ನಿರ್ಮಲಾ ಇವಳನ್ನು 2 ನೇ ಆರೋಪಿತನ ಜೊತೆಗೆ ಮದುವೆ ಮಾಡಿಕೊಟ್ಟಿರುತ್ತಾರೆ ಎಂದರೆ ಸರಿ. ಸದರಿ ಅವರ ಮದುವೆ ಲವ್ ಮಾರೇಜ ಆಗಿರುತ್ತದೆ. 6 ನೇ ಆರೋಪಿತಳು ಅದ್ಯಕ್ಷೆ ಇರುವುದರಿಂದ ಅವರೆಲ್ಲ ಕುಟುಂಬದ ಸದಸ್ಯೆರ ವಿರುದ್ದ ಪ್ರಕರಣವನ್ನು

ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. 13 ಮತ್ತು 14 ನೇ ಆರೋಪಿತರು ತಮ್ಮ ಜಾಗದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಸಿಸಿ ರೋಡು ಮಾಡಬೇಕಾದರೆ ಎರಡೂ ಬದಿಯಲ್ಲಿ ಚರಂಡಿ ಮಾಡಿ ಸಿಸಿ ರೋಡು ಮಾಡುತ್ತಾರೆ ಎಂದರೆ ಸಾಕ್ಷಿಯು ನಮ್ಮ ಮನೆಯ ಮುಂದೆ ಇಲ್ಲ ಎಂದು ನುಡಿಯುತ್ತಾರೆ ಹಾಗೂ ಉಳಿದ ಎಲ್ಲಾ ಕಡೆ ಚರಂಡಿ ವ್ಯವಸ್ಥೆ ಇದೆ ಎಂದು ನುಡಿಯುತ್ತಾರೆ. ಸದರಿ ನನ್ನ ಮತ್ತು 13 ಮತ್ತು 14 ರವರ ಮೋರಿ ನೀರಿನ ಸಲುವಾಗ ಜಗಳವೆಂದರೆ ಸರಿ. ಸದರಿ ಸಿಸಿ ರೋಡು ಮಾಡುವಾಗ ಚಾಸಾಃ 4 ರವರು ತಕರಾರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ತಕರಾರು ಮಾಡಿದ ನಂತರ ಆರೋಪಿತರು ಸಿಸಿ ರೋಡು ಮಾಡಿರುತ್ತಾರೆ ಎಂದರೆ ಸಾಕ್ಷಿಯು ಅವರ ಅವಧಿಯಲ್ಲಿ ಮಾಡಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ನನ್ನ ಮತ್ತು ಚಾಸಾಃ 13 ಮತ್ತು 14 ರವರ ನಡುವೆ ಮೋರಿ ಸಲುವಾಗಿ ಜಗಳವಿತ್ತು ಎಂದರೆ ಸರಿಯಲ್ಲ. ಸದರಿ ನನ್ನ ಮತ್ತು ಚಾಸಾಃ 13 ಮತ್ತು 14 ರವರ ನಡುವೆ ಮೋರಿ ಸಲುವಾಗಿ ಜಗಳವಾದಾಗ ಚಾಸಾಃ 13 ಮತ್ತು 14 ರವರು ಚಾಸಾಃ 6 ರವರಿಗೆ ಹೇಳಿದಾಗ ಚಾಸಾಃ 6 ರವರು ಕಾಲಿಂ ಸಾಬ ಮತ್ತು ಬಸವರಾಜ ಮತ್ತು ಬಾಬುಗೌಡ ಇವರಿಗೆ ಜಗಳ ಬಗೆಹರಿಸಲು ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ.

ಸದರಿ ಜಗಳ ಬಿಡಿಸಲು ಬಂದ ವ್ಯಕ್ತಿಗಳು ನನ್ನ ತಪ್ಪು ಇದೆ ಮತ್ತು ಚಾಸಾಃ 13 ಮತ್ತು 14 ರವರ ತಪ್ಪು ಇಲ್ಲ ಎಂದು ಹೇಳಿರುತ್ತಾರೆ ಎಂದರೆ ಸರಿಯಲ್ಲ. ನಾನು ಆಶಾ ಕಾರ್ಯಕರ್ತೆಯಾಗಿ ಸನಃ 2008 ರಿಂದ ಕೆಲಸ ಮಾಡುತ್ತಿದ್ದೇನೆ. ಸದರಿ ನನ್ನ ಕೆಲಸವೇನೆಂದರೆ ಗ್ರಾಮದ ಎಲ್ಲಾ ಗರ್ಭಿಣಿಯರಿಗೆ ಆಹಾರ ಸೌಲಭ್ಯಗಳನ್ನು ನೀಡುವುದು ಇರುತ್ತದೆ ಎಂದರೆ ಸರಿ. ಸದರಿ ನಾನು ಕೆಲಸ ಸರಿಯಾಗಿ ಮಾಡದೇ ಇರುವುದರಿಂದ ಆರೋಪಿ ನಂಬರ 6 ರವರು ನನಗೆ ತಾಕಿತು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿತರಿಗೆ ಈ ಕೇಸಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಸದರಿ ನಿಪಿ-1 ರಲ್ಲಿ ನಿಮ್ಮ ಮನೆಯ ನೀರು ನಮ್ಮ ಮನೆ ಏಕೆ ಬಿಡುತ್ತೀರಿ ನಿಮಗೆ ಎಷ್ಟು ಸಲ ಹೇಳಿದರೂ ಕೇಳುತ್ತಿಲ್ಲ ಎಂದು ಯಾರು ಹೇಳಿರುತ್ತಾರೆ? ಎಂದರೆ ಸಾಕ್ಷಿಯು ಆರೋಪಿ ನಂಬರ 13 ಮತ್ತು 14 ರವರು ಅಂದಿರುತ್ತಾರೆ. ಸದರಿ ಚರಂಡಿ ನೀರಿನ ಸಲುವಾಗಿ ನನಗೆ ಮತ್ತು ಆರೋಪಿ ನಂಬರ 13 ಮತ್ತು 14 ರವರ ನಡುವೆ ಜಗಳವಿತ್ತು ಎಂದರೆ ಸರಿ. ಸದರಿ 1 ನೇ ಆರೋಪಿತನು ಯಾವ ಕೈಯಿಂದ, ಯಾವ ಎದೆಯ ಭಾಗಕ್ಕೆ ಚಾಸಾಃ 4 ರವರಿಗೆ ಹೊಡೆದಿರುತ್ತಾರೆ ಎಂದರೆ ಸಾಕ್ಷಿಯು ಎಡಭಾಗಕ್ಕೆ ಹೊಡೆದಿರುತ್ತಾನೆ ಎಂದು ನುಡಿಯುತ್ತಾರೆ. ಸದರಿ ಈ ವಿಷಯವು ಮೊದಲನೆ ಬಾರಿಗೆ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಚಾಸಾಃ 4 ರವರು ಕುಡಿದು ಊರೆಲ್ಲ ತಿರುಗಾಡುತ್ತಾರೆ ಎಂದರೆ

ಸರಿಯಲ್ಲ. ಸದರಿ ಆರೋಪಿ ನಂಬರ 13 ಮತ್ತು 14 ರವರು ಮತ್ತು ನಮ್ಮ ನಡುವೆ ಯಾವುದೇ ಜಗಳವಿರುವುದಿಲ್ಲ. ಪಿರ್ಯಾದಿಯನ್ನು ನೀಡಲು ನಾನು ಒಬ್ಬಳೇ ಪೋಲಿಸ ಠಾಣೆಗೆ ಹೋಗಿರುತ್ತೇನೆ. ಸದರಿ ಚಾಸಾಃ 4, 5, 6 ರವರಿಗೆ ಆರೋಪಿತರು ಹೊಡೆದಿದ್ದರಿಂದ ನಾನು ಹೋಗಿ ಪಿರ್ಯಾದಿಯನ್ನು ದಾಖಲಿಸಿರುತ್ತೇನೆ. 2 ನೇ ಆರೋಪಿತನು ನನ್ನ ಗಂಡನ ಅಣ್ಣನ ಮಗಳನ್ನು ಮದುವೆ ಮಾಡಿಕೊಂಡಿದ್ದ ಆದ್ದರಿಂದ ನಮ್ಮಲ್ಲಿ ದ್ವೇಶವಿತ್ತು ಎಂದು ಸರಿಯಲ್ಲ. ನಾವು ಮತ್ತು ಆರೋಪಿತರು ಮಾತನಾಡುತ್ತಿರಲಿಲ್ಲ ಎಂದರೆ ಸರಿಯಲ್ಲ. ಬಾಪುಗೌಡ ಇವರು ಜೆ.ಡಿ.ಎಸ್. ಮುಖಂಡರು ಎಂದರೆ ಸರಿ. ನಮ್ಮ ಮತ್ತು ಆರೋಪಿತರ ನಡುವೆ ರಾಜಕೀಯವಾಗಿ ಬಿನ್ನಾಭಿಪ್ರಾಯವಿರುದರಿಂದ ಸುಳ್ಳು ಕೇಸು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ ನಾನು ನನ್ನ ಕೆಲಸ ಸರಿಯಾಗಿ ಮಾಡುವುದಿಲ್ಲ ಆದ್ದರಿಂದ ಆ ದ್ವೇಶದಿಂದ ಪ್ರಸ್ತುತ ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ 1 ರಿಂದ 12 ರವರ ಆರೋಪಿತರ ಮನೆ ನನ್ನ ಮನೆ ದೂರ ಇರುವುದರಿಂದ ಮತ್ತು 13 ಮತ್ತು 14 ನೇ ಆರೋಪಿತರ ಮನೆ ನಮ್ಮ ಮನೆಗೆ ಸಮೀಪ ಇರುವುದರಿಂದ ನಮಗೆ ಮತ್ತು 13 ಮತ್ತು 14 ನೇ ಆರೋಪಿತರ ನಡುವೆ ಮೋರಿಯ ಸಲುವಾಗಿ ಜಗಳವಿದ್ದರೂ ನಾನು 1 ರಿಂದ 12 ರವರ ಆರೋಪಿತರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಸದರಿ 1 ರಿಂದ 12 ನೇ ಆರೋಪಿತರು ನನ್ನ ಮನೆಗೆ ಬಂದಿಲ್ಲ ಮತ್ತು ನಮಗೆ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ಜರುಗದಿದ್ದರೂ ಕೂಡ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಎಲ್ಲರೂ ಬಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಕಲ್ಲಿನಿಂದ ಮತ್ತು ಬಡಿಗೆಯಿಂದ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಆರೋಪಿತರು ಕಲ್ಲಿನಿಂದ ಹೊಡೆದಿರುತ್ತಾರೆ. ಸದರಿ ಪ್ರಕರಣದಲ್ಲಿ ಯಾವುದೇ ಕಲ್ಲು ಜಪ್ತಿಯಾಗಿರುವುದಿಲ್ಲ ಆದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮು. ಮಾ. 1 ರಿಂದ 3 ಇವು ಕಟ್ಟಿಗೆ ಇವೆ ಬಡಿಗೆ ಅಲ್ಲ ಎಂದರೆ ಸಾಕ್ಷಿಯು ಅವು ಕಟ್ಟಿಗೆ, ಬಡಿಗೆ ಇದ್ದವು ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಬಡಿಗೆಗಳು ಉದ್ದವಾಗಿರುತ್ತವೆ ಎಂದರೆ ಸರಿ. ಸದರಿ ಮು. ಮಾ. 1 ರಿಂದ 3 ಒಲೆಯಲ್ಲಿ ಹಾಕುವ ಕಟ್ಟಿಗೆ ಇದೆ ಎಂದರೆ ಸರಿ. ಸದರಿ ಮು. ಮಾ. 1 ರಿಂದ 3 ಇರುವಂತಹ ಕಟ್ಟಿಗೆಗಳು ಎಲ್ಲಾ ಕಡೆ ಸಿಗುತ್ತವೆ ಎಂದರೆ ಸರಿ. ಸದರಿ ಮು. ಮಾ. 1 ರಿಂದ 3 ಈ ಪ್ರಕರಣಕ್ಕೆ ಸಂಬಂಧವಿಲ್ಲವೆಂದರೆ ಸರಿಯಲ್ಲ. ಸದರಿ ಮು. ಮಾ. 1 ರಿಂದ 3 ಕಟ್ಟಿಗೆಗಳು ಯಾರ ಕೈಯಲ್ಲಿ ಇದ್ದವು ಎಂದರೆ ಸಾಕ್ಷಿಯು 2, 3 ಮತ್ತು 8 ನೇ ಆರೋಪಿತರ ಕೈಯಲ್ಲಿತ್ತು ಎಂದು ನುಡಿಯುತ್ತಾರೆ.

ಸದರಿ ಈ ವಿಷಯವನ್ನು ನ್ಯಾಯಾಲಯದಲ್ಲಿ ಮೊದಲನೆ ಬಾರಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸದರಿ ಮು. ಮಾ. 1 ರಿಂದ 3 ಎಷ್ಟು ಉದ್ದ ಇದ್ದವು ಮತ್ತು ಯಾವ ಜಾತಿಯ ಬಡಿಗೆಗಳು ಇದ್ದವು ಎಂದು ನಿಪಿ-1 ರಲ್ಲಿ ಬರೆಸಿದ್ದೀಯಾ? ಎಂದರೆ ಸಾಕ್ಷಿಯು ಬರೆಸಿರುವುದಿಲ್ಲ ಎಂದು ನುಡಿಯುತ್ತಾರೆ. ಸದರಿ ಆರೋಪಿತರು ಘಟನಾ ಸ್ಥಳಕ್ಕೆ ಬಂದಿರುವುದಿಲ್ಲ ಆದ್ದರಿಂದ ಬಡಿಗೆಯ ಬಗ್ಗೆ ಬರೆಸಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಆರೋಪಿತರಿಗೆ ಮತ್ತು ಈ ಪ್ರಕರಣಕ್ಕೂ ಯಾವುದೇ ಸಂಬಂಧವಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಮು. ಮಾ. 1 ರಿಂದ 3 ಆರೋಪಿತರೇ ತೆಗೆದುಕೊಂಡು ಹೋಗಿರುತ್ತಾರೆ. ಸದರಿ ಬಡಿಗೆಗಳು ದಪ್ಪವಿದ್ದವು. ಸದರಿ ಮು. ಮಾ. 1 ರಿಂದ 3 ಇವೇ ಇದ್ದವು ಎಂದು ನುಡಿಯುತ್ತಾರೆ.

**ಮರು ವಿಚಾರಣೆ : ಇಲ್ಲ**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು).

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು ಯಾದಗಿರಿ**